ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1229 (1425)
2. ಸದಸ್ಯರ ಹೆಸರು : ಶ್ರೀ ಹೆಚ್.ಎಂ.ರಮೇಶ್ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು
3. ಉತ್ತರಿಸಬೇಕಾದ ದಿನಾಂಕ : 19-03-2020
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬೆಂಗಳೂರು ನಗರದಲ್ಲಿ ಪ್ರಸ್ತುತ ಯಾವ ಯಾವ ಮಾರ್ಗದಲ್ಲಿ ಮೆಟ್ರೋ ರೈಲುಗಳು ಸಂಚರಿಸುತ್ತಿವೆ;	ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-1ರಲ್ಲಿ ಎರಡು ಕಾರಿಡಾರ್‌ಗಳನ್ನು ಒಳಗೊಂಡಿರುತ್ತದೆ.ಪೂರ್ವ-ಪಶ್ಚಿಮ ಕಾರಿಡಾರ್ 18.10 ಕಿ.ಮೀ. ಬೈಯ್ಯಪ್ಪನಹಳ್ಳಿಯಿಂದ ಮೊದಲುಗೊಂಡು ಮೈಸೂರು ರಸ್ತೆ ಟರ್ಮಿನಲ್‌ನಲ್ಲಿ ಕೊನೆಗೊಳ್ಳುತ್ತದೆ. ಉತ್ತರ-ದಕ್ಷಿಣ ಕಾರಿಡಾರ್‌ಗಳ ಉದ್ದ 24.20 ಕಿ.ಮೀ. ನಾಗಸಂದ್ರದಿಂದ ಮೊದಲುಗೊಂಡು ಯಲಚೇನಹಳ್ಳಿಯಲ್ಲಿ ಕೊನೆಗೊಳ್ಳುತ್ತದೆ.
ಆ)	ಇವುಗಳಲ್ಲಿ ಪ್ರತಿದಿನ ಸಂಚರಿಸುವ ಸಾರ್ವಜನಿಕರ ಸಂಖ್ಯೆ ಎಷ್ಟು; ಇದರಿಂದ ಬಿ.ಎಂ.ಆರ್.ಸಿ.ಎಲ್‌ಗೆ ಬರುವ ವಾರ್ಷಿಕ ಆದಾಯ ಎಷ್ಟು; ಪ್ರಸ್ತುತ ಈ ಯೋಜನೆಗೆ ಯಾವ ಯಾವ ಸಂಸ್ಥೆಗಳಿಂದ ಹಣವನ್ನು ಪಡೆಯಲಾಗಿದೆ; (ವಿವರ ನೀಡುವುದು)	ಪ್ರತಿ ದಿನ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆ ಸರಾಸರಿ 4 ಲಕ್ಷಗಳು. ಈ ಯೋಜನೆಯಿಂದ ಬರುವ ವಾರ್ಷಿಕ ಆದಾಯ ಮತ್ತು ವಿವಿಧ ಸಂಸ್ಥೆಗಳಿಂದ ಪಡೆಯಲಾದ ಹಣದ ವಿವರಗಳು ಕೆಳಕಂಡತಿವೆ: **ವಾರ್ಷಿಕ ಆದಾಯ:** 2018-19 ನೇ ಸಾಲಿನಲ್ಲಿ – 354.51 ಕೋಟಿಗಳು 2019-20ನೇ(ಫೆಬ್ರವರಿ ಅಂತ್ಯದವರೆಗೆ) –358.09 ಕೋಟಿಗಳು **ಸಂಸ್ಥೆಗಳಿಂದ ಹಣ ಪಡೆದ ವಿವರ:**

ಕ್ರ. ಸಂ.	ಸಂಸ್ಥೆ ಹೆಸರು	ರೂ. ಕೋಟಿಗಳಲ್ಲಿ
1	ಫ್ರೆಂಚ್ ಡೆವಲೆಪ್ ಮೆಂಟ್ ಏಜೆನ್ಸಿ (AFD)	873.29
2	ಜಪಾನ್ ಇಂಟರ್ ನ್ಯಾಷನಲ್ ಕೋ-ಆಪರೇಷನ್ ಏಜೆನ್ಸಿ (JICA)	3208.10
3	ಹುಡ್ಕೊ	650.00
4	ಕೆ.ಯು.ಐ.ಡಿ.ಎಫ್.ಸಿ	34.18

ಇ)	ಮುಂದಿನ ಹಂತದಲ್ಲಿ ಯಾವ ಯಾವ ಮಾರ್ಗಗಳಲ್ಲಿ ಹೊಸದಾಗಿ ಮೆಟ್ರೋ ರೈಲು ಯೋಜನೆಗಳನ್ನು ಕೈಗೊಳ್ಳಲಾಗುವುದು;ಈ ಯೋಜನೆಗೆ ನಿಗಮವು ಎಷ್ಟು ಹಣವನ್ನು ವಿನಿಯೋಗಿಸುತ್ತಿದೆ;	ಬೆಂಗಳೂರು ಮೆಟ್ರೋ ರೈಲು ಹಂತ-2ರ ಯೋಜನೆಯು ಹಂತ-1ರ ನಾಲ್ಕು ವಿಸ್ತರಣೆ ಹಾಗೂ ಎರಡು ಹೊಸ ಮಾರ್ಗಗಳನ್ನು ಒಳಗೊಂಡಿರುತ್ತದೆ. ಹಂತ-2ರ ಯೋಜನೆಯು ಒಟ್ಟು 72.095 ಕಿ.ಮೀ. ಹಳಿ ಉದ್ದವಿದ್ದು, 61 ನಿಲ್ದಾಣಗಳನ್ನು (49 ಎಲಿವೇಟೆಡ್ ಮತ್ತು 12 ಸುರಂಗಮಾರ್ಗ) ಹೊಂದಿದೆ. ಸದರಿ ಕಾಮಗಾರಿಯ ಒಟ್ಟು ಅಂದಾಜು ವೆಚ್ಚ ರೂ.30,695 ಕೋಟಿಗಳಿರುತ್ತದೆ.
ಈ)	ಈ ಯೋಜನೆಗೆ ಯಾವ ಯಾವ ಸಂಸ್ಥೆಗಳಿಂದ ಹಣವನ್ನು ಪಡೆಯಲಾಗುವುದು?	ಈ ಯೋಜನೆಗೆ ಹಣವನ್ನು ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದಿಂದ ಪಡೆಯುವುದಲ್ಲದೇ ವಿದೇಶ ಸಂಸ್ಥೆಗಳಾದ ಫ್ರೆಂಚ್ ಡೆವಲೆಪ್‌ಮೆಂಟ್ ಏಜೆನ್ಸಿ (AFD), ಯೂರೋಪಿಯನ್ ಇನ್‌ವೆಸ್ಟ್‌ಮೆಂಟ್ ಬ್ಯಾಂಕ್ (EIB), ಜಪಾನ್ ಇಂಟರ್ ನ್ಯಾಷನಲ್ ಕೋ-ಆಪರೇಷನ್ ಏಜೆನ್ಸಿ (JICA), ಏಷಿಯನ್ ಡೆವಲೆಪ್‌ಮೆಂಟ್ ಬ್ಯಾಂಕ್ (ADB) ಮತ್ತು ಏಷಿಯನ್ ಇನ್ಫ್ರಾಸ್ಟ್ರಕ್ಚರ್ ಇನ್‌ವೆಸ್ಟ್‌ಮೆಂಟ್ ಬ್ಯಾಂಕ್ (AIIB) ಸಂಸ್ಥೆಗಳಿಂದ ಪಡೆಯಲಾಗುವುದು.

ಕಡತ ಸಂಖ್ಯೆ: ನಅಇ 82 ಪಿ.ಆರ್.ಜೆ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಗಳು